## ಪೇಪರ್ ಕ್ಯಾಮೆರಾ



ಫೋಟೋಗ್ರಫಿ ಎಂದಾಕ್ಷಣ ಕಂಪ್ಯೂಟರ್ ಮತ್ತು ಸ್ಮಾರ್ಟ್‌ಫೋನ್ ಬಳಕೆದಾರರಿಗೆ ನೆನಪಾಗುವುದು ವಿಶೇಷ ಪರಿಣಾಮಗಳನ್ನು ಸೇರಿಸುವ ಫೋಟೋಷಾಪ್ ಅಥವಾ ಇನ್‌ಸ್ಟಾಗ್ರಾಮ್. ಇವುಗಳ ಹೊರತಾಗಿ ಈಗ ವೈಶಿಷ್ಟ್ಯಪೂರ್ಣವಾದ ಪೇಪರ್ ಕ್ಯಾಮೆರಾ ಬಂದಿದೆ. ಈ ಅಪ್ಲಿಕೇಶನ್ ನೀವು ಕ್ಯಾಮೆರಾದಲ್ಲಿ ನೋಡುವ ಜಗತ್ತನ್ನೇ ಬದಲಾಯಿಸಿಬಿಡುತ್ತದೆ. ಇದರಲ್ಲಿರುವ ಫಿಲ್ಟರ್ ನಿಜವಾದ ಚಿತ್ರವನ್ನು ಚಿತ್ರ ಪುಸ್ತಕದ ರೇಖಾಚಿತ್ರಕ್ಕೆ ಬದಲಾಯಿಸಿಬಿಡುತ್ತದೆ.

ಫೋಟೊ ರೇಖಾಚಿತ್ರ ಅಥವಾ ಡಾಟ್ ಮ್ಯಾಟ್ರಿಕ್ಸ್ ಪ್ರಿಂಟರ್‌ನಿಂದ ತೆಗೆದ ಪ್ರಿಂಟ್‌ಔಟ್ ಆಗಿ ಬದಲಾಗುವುದೆಂದರೆ ಅದಕ್ಕಿಂತ ತಮಾಷೆ ಇನ್ನೇನಿದೆ! ಇಲ್ಲಿರುವ ಫಿಲ್ಟರ್‌ನಿಂದ ಕಾಂಟ್ರಾಸ್ಟ್, ಬೆಳಕು, ಗೆರೆಯ ದಪ್ಪವನ್ನು ಬದಲಾಯಿಸಬಹುದು. ಮಹತ್ವದ ಅಂಶವೆಂದರೆ ಇದೆಲ್ಲಾ ಬದಲಾಗುವುದು ನೀವು ಫೋಟೊ ತೆಗೆದ ನಂತರವಲ್ಲ, ಕ್ಯಾಮೆರಾದಿಂದ ಫೋಟೊ ತೆಗೆಯುವಾಗಲೇ ಬದಲಾಗಿಬಿಡುತ್ತದೆ. ನೀವು ವ್ಯೂಫೈಂಡರ್‌ನಲ್ಲೇ ಇವೆಲ್ಲ ಕಂಡು ನಿಮ್ಮ ಬಾಲ್ಯದ ಚಿತ್ರ ಪುಸ್ತಕದ ಲೋಕವೇ ಇಳಿದಂತೆ ಮಜಾ ಅನುಭವಿಸಬಹುದು. ನಿಧಾನ ಪ್ರವೃತ್ತಿಯವರಾದರೆ, ಹಳೆಯ ಸಂಪ್ರದಾಯ ರೂಢಿಸಿಕೊಂಡವರಾದರೆ ಫೋಟೊ ತೆಗೆದ ನಂತರ ನಿಧಾನವಾಗಿ ಇವೆಲ್ಲವನ್ನೂ ಬದಲಾಯಿಸುವ ಅಪ್ಲಿಕೇಶನ್ ಕೂಡಾ ಇದರಲ್ಲಿ ಲಭ್ಯ. ಇದರಂತೆ ವಿಡಿಯೊ ಕೂಡಾ ಮಾಡಬಹುದು.

ಆದರೆ ವ್ಯೂಫೈಂಡರ್‌ನಲ್ಲಿ ಕಂಡು ಬರುವ ಎಡಿಟಿಂಗ್ ಗೋಜಲುಗಳು ನಿಮ್ಮನ್ನು ಕಕಮಕಗೊಳಿಸುವುದು ಖಂಡಿತ. ಇದರ ಮಧ್ಯೆ ಆಟೊಫೋಕಸಿಂಗ್ ಕಂಡು ಬರದೇ ನಿಮ್ಮ ಮೊಬೈಲ್ ಕ್ಯಾಮೆರಾ ಮೇಲೆ ಜೋರಾಗಿ ಚಿವುಟಿ, ಬೆಳಿನಿಂದ ಕುಟ್ಟಿ ಸೇಡು ತೀರಿಸಿಕೊಳ್ಳಬೇಕಷ್ಟೆ. ಆದರೂ ಇವುಗಳನ್ನು ಸದ್ಯದಲ್ಲೇ ಸರಿಪಡಿಸುವುದಾಗಿ ಪೇಪರ್ ಕ್ಯಾಮೆರಾ ಅಪ್ಲಿಕೇಶನ್ ಸೃಷ್ಟಿಸಿದವರು ಹೇಳಿಕೊಂಡಿದ್ದಾರೆ. ಸದ್ಯಕ್ಕಂತೂ ಇದು ಉಚಿತವಲ್ಲ. ಆ್ಯಂಡ್ರಾಯ್ಡ್ ಫೋನ್‌ಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು.

## ಸ್ಪೈ ಸಾಫ್ಟ್‌ವೇರ್

ಮೊಬೈಲ್ ಸ್ಪೈ ಸಾಫ್ಟ್‌ವೇರ್ 'ಇ-ಫೋನ್ ಟ್ರ್ಯಾಕರ್' ಈಗ ಅಧಿಕೃತವಾಗಿ ಗೂಗ್ಲ್ ಪ್ಲೇನಲ್ಲಿ ಲಭ್ಯ. ಈ ಸಾಫ್ಟ್‌ವೇರ್ ಆ್ಯಂಡ್ರಾಯ್ಡ್ ಫೋನಿನ ಪ್ರತಿಯೊಂದು ಚಟುವಟಿಕೆಯ ಮೇಲೆ ನಿಗಾ ಇಟ್ಟು ಬಳಕೆದಾರರ ಇ-ಮೇಲ್ ಖಾತೆಗೆ ಕಳಿಸುತ್ತದೆ. ಫೋನ್‌ನಲ್ಲಿ ಇ-ಫೋನ್ ಟ್ರ್ಯಾಕರ್ ಅನ್ನು ಸೆಟ್ ಮಾಡಿದ ನಂತರ ಎಸ್‌ಎಂಎಸ್, ಕರೆ ವಿವರ, ಜಿಪಿಎಸ್ ಮೊದಲಾದವುಗಳನ್ನು ದಾಖಲಿಸಿ ವರದಿಯನ್ನು ಇ-ಮೇಲ್ ಖಾತೆಗೆ ಕಳಿಸುತ್ತದೆ. ಅಂದರೆ ನೀವು ಇದೆಲ್ಲವನ್ನೂ ಮೊಬೈಲ್‌ನಲ್ಲಿ ಡಿಲೀಟ್ ಮಾಡಿದ ಮೇಲೂ ಇದು ಎಲ್ಲವನ್ನೂ ಕರಾರುವಾಕ್ಕಾಗಿ ಕಳಿಸುತ್ತದೆ. ಈ ಅಪ್ಲಿಕೇಶನ್‌ಗೆ ಪಾಸ್‌ವರ್ಡ್ ರಕ್ಷಣೆಯೂ ಇದೆ. ಇದನ್ನು ಆ್ಯಂಡ್ರಾಯ್ಡ್ ಓಎಸ್ 2.1 ಹಾಗೂ ಅದಕ್ಕಿಂತ ಹೆಚ್ಚಿನ ಸಾಮರ್ಥ್ಯ ಇರುವ ಸ್ಮಾರ್ಟ್‌ಫೋನ್‌ನಲ್ಲಿ ಅಳವಡಿಸಬಹುದು.

## 3ಡಿ ಡ್ರೈವರ್

ಎನಾಗ್ಲಿಫ್ 3ಡಿನಲ್ಲಿ ಗೇಮ್‌ಗಳನ್ನು ಆಡಲು ಐಝೆಡ್3ಡಿ ಡ್ರೈವರ್ ಹೊಸದಾಗಿ ಬಂದಿದೆ. ಒಳ್ಳೆಯ ಫಲಿತಾಂಶಕ್ಕೆ 3ಡಿ ಎನಾಗ್ಲಿಫ್ ಗಾಜುಗಳನ್ನು ಅದರಲ್ಲೂ ಕೆಂಪು ಮತ್ತು ಆಕಾಶನೀಲಿ ಬಣ್ಣದ ಗಾಜುಗಳನ್ನು ಬಳಸಬಹುದು. ಬ್ಯಾಟ್‌ಮ್ಯಾನ್ ಅರ್ಖಾಮ್ ಸಿಟಿ, ಅಸಾಸಿನ್ಸ್ ಕ್ರೀಡ್ ಮೊದಲಾದವುಗಳನ್ನು ವಿಶೇಷ ಉಪಕರಣಗಳಿಲ್ಲದೇ ನೋಡಬಹುದು. iz3d.com ನಿಂದ ಇದನ್ನು ಅಳವಡಿಸಿಕೊಳ್ಳಬಹುದು.

■ ಎಸ್.ತುಂಬೆ

## ಜಿಯೋಸೆನ್ಸ್

ಜಿಪಿಎಸ್ ನೆರವಿಲ್ಲದೇ ಸ್ಥಳ ಗುರುತು ವ್ಯವಸ್ಥೆಯನ್ನು ನಿಮ್ಮ ಕಂಪ್ಯೂಟರ್‌ನಲ್ಲಿ ಜಿಯೋಸೆನ್ಸ್ ಮೂಲಕ ಕ್ರಿಯಾಶೀಲಗೊಳಿಸಬಹುದು. ನಿಮ್ಮ ಐಪಿ ಅಡ್ರೆಸ್ ಅಥವಾ ವೈಫೈ ನಿಂದ ಅದು ಸ್ಥಳವನ್ನು ಗುರುತಿಸುತ್ತದೆ. ಇದನ್ನು ಅಳವಡಿಸಿಕೊಂಡರೆ ವಿವಿಧ ಅಪ್ಲಿಕೇಶನ್‌ಗಳ ಜಿಯೊಲೊಕೇಶನ್ ಸೌಲಭ್ಯಗಳನ್ನು ಬಳಸಬಹುದು. ಜಿಯೋಸೆನ್ಸ್ ವಿಂಡೋಸ್ 7ರಲ್ಲಿ ಮಾತ್ರ ಕೆಲಸ ಮಾಡುತ್ತದೆ.

